UNIVERSITY LIBRARY
MONDAY 24-11-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ರೇಷ್ಮೆ ಬೆಳೆಗಾರರಿಗೆ ಬಂತು ಶುಕ್ರದೆಸೆ

■ ವಿಭೂತಿಕೆರೆ ಶಿವಲಿಂಗಯ್ಯ ರಾಮನಗರ ಮಾರುಕಟ್ಟೆಯಲ್ಲಿ ರೇಷ್ಮೆ ಗೂಡು ಬೆಲೆ ಕೆಲ ದಿನಗಳಿಂದ ಏರಿಕೆ ಕಾಣುತ್ತಿದ್ದು, ಬೆಳೆಗಾರರಲ್ಲಿ ಲಾಭದ ಭರವಸೆ ಮೂಡಿಸಿದೆ.

ರಾಮನಗರ ಮಾರುಕಟ್ಟೆಯಲ್ಲಿ ಶುಕ್ರವಾರ ಒಂದು ಕೆ.ಜಿ. ದ್ವಿತಳಿ ರೇಷ್ಮೆಗೂಡು ಪ್ರಸಕ್ತ ವರ್ಷದಲ್ಲೇ ಇದೇ ಮೊದಲಿಗೆ ದಾಖಲೆ ಮಟ್ಟದಲ್ಲಿ 905 ರೂ.ಗೆ ಹರಾಜಾಗಿದ್ದು, ಸಾವಿರ ರೂ. ಗಡಿ ಸಮೀಪಿಸುವ ಮುನ್ಸೂಚನೆ ನೀಡಿದೆ. 2022ರಲ್ಲಿ ರೈತರೊಬ್ಬರ ಗೂಡು ಸಾವಿರ ರೂ. ಗಡಿ ದಾಟಿದ್ದೇ ಈವರೆಗಿನ ದಾಖಲೆಯಾಗಿತ್ತು.

■ ದಿನೇದಿನೆ ಏರಿಕೆ ಕಾಣುತ್ತಿದೆ ದರ

ಶುಕ್ರವಾರ ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಕೆಸ್ತೂರು ರೇಷ್ಮೆ ಬೆಳೆಗಾರರೊಬ್ಬರಿಗೆ ಒಂದು ಕೆ.ಜಿ. ರೇಷ್ಮೆಗೂಡಿಗೆ 905 ರೂ. ಬೆಲೆ ದೊರೆತಿದೆ. ಮಿಶ್ರತಳಿ ರೇಷ್ಮೆ ದರವೂ ಮೂರ್ನಾಲ್ಕು ದಿನಗಳಿಂದ ಏರುತ್ತಿದ್ದು, 800 ರೂ. ಗಡಿ ದಾಟುತ್ತಿದೆ. ದರ ಹೀಗೆ ಸಾಗುತ್ತಿದ್ದರೆ ಮಿಶ್ರತಳಿ ರೇಷ್ಮೆಯೂ ಸಾವಿರ ರೂ. ಗಡಿ ಮುಟ್ಟಬಹುದು ಎಂದು ಬೆಳೆಗಾರರಲ್ಲಿ ಭರವಸೆ ಮೂಡಿಸಿದೆ.

ಕಟ್ಟುನಿಟ್ಟಿನ ಕ್ರಮ: ಮಾರುಕಟ್ಟೆಗಳ ಪ್ರತಿ ವಿಭಾಗದಲ್ಲಿ ಸಿಸಿ ಕ್ಯಾಮರಾ ಅಳವಡಿಕೆ, ರೇಷ್ಮೆ ಬೆಳೆಗಾರರಿಗೆ ಆಗುತ್ತಿದ್ದ ಕಿರುಕುಳಕ್ಕೆ ಬ್ರೇಕ್, ರೇಷ್ಮೆಗೂಡು ಕದಿಯುತ್ತಿದ್ದವರ ವಿರುದ್ಧ ಎಫ್ಐಆರ್ ದಾಖಲಿಸಿ ಕಠಿಣ ಕ್ರಮ, ರೈತರಿಗೆ ನೇರವಾಗಿ ಗೂಡಿನ ಮೌಲ್ಯಕ್ಕೆ ತಕ್ಕಂತೆ ದರ, ಇ-ಪೇಮೆಂಟ್ ಸೌಲಭ್ಯ ಹೀಗೆ ಹಲವು ಕಟ್ಟುನಿಟ್ಟಿನ ಕ್ರಮ ಹಾಗೂ ಸುಧಾರಿತ ವ್ಯವಸ್ಥೆಗಳನ್ನು ಮಾರುಕಟ್ಟೆಯಲ್ಲಿ ಒದಗಿಸಿರುವ ಕಾರಣ ರೇಷ್ಮೆ ಗೂಡು ಮಾರಾಟದಲ್ಲಿ ರೈತರಿಗೆ ಹೆಚ್ಚಿನ, ನೈಜ ಬೆಲೆ ಸಿಗುತ್ತಿದೆ ಎನ್ನಲಾಗಿದೆ.



ರಾಮನಗರದಲ್ಲಿರುವ ರೇಷ್ಮೆ ಮಾರುಕಟ್ಟೆಯೊಳಗಿನ ಚಿತ್ರಣ.



ರೇಷ್ಮೆ ಮಾರುಕಟ್ಟೆಯಲ್ಲಿ ಸಾಕಷ್ಟು ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ. ದಿನದಿಂದ ದಿನಕ್ಕೆ ದ್ವಿತಳಿ ಮತ್ತು ಮಿಶ್ರತಳಿ ಗೂಡು ದರದಲ್ಲಿ ಏರಿಕೆ ಕಾಣುತ್ತಿದೆ. ದರ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ರೇಷ್ಮೆ ತರುವ ರೈತರಿಗೆ ಯಾವುದೇ ರೀತಿ ಸಮಸ್ಯೆ ಆಗದಂತೆ ಮಾರುಕಟ್ಟೆಯಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ.

| ಎಂ. ಮಲ್ಲಿಕಾರ್ಜುನಸ್ವಾಮಿ
ರೇಷ್ಮೆ ಮಾರುಕಟ್ಟೆಯ ರೇಷ್ಮೆ ಜಂಟಿ ನಿರ್ದೇಶಕ, ರಾಮನಗರ



ಕಳೆದ 20 ವರ್ಷಗಳಿಂದಲೂ ಸಿಬಿ ರೇಷ್ಮೆ ಬೆಳೆಯುತ್ತಿದ್ದೆ. ಕೂಲಿ ಕಾರ್ಮಿಕರ ಕೊರತೆಯಿಂದ ಕಳೆದ ವರ್ಷದಿಂದ ದ್ವಿತಳಿ (ಸಿಎಸ್ಆರ್) ರೇಷ್ಮೆಯತ್ತ ಮುಖ ಮಾಡಿದೆ. 120 ಮೊಟ್ಟೆ ಚಾಕಿ ಹುಳುವಿಗೆ 102 ಕೆ.ಜಿ. ರೇಷ್ಮೆ ಉತ್ಪಾದನೆಯಾಗಿದ್ದು, ಕೆ.ಜಿ.ಗೆ 905 ರೂ. ದರ ಸಿಕ್ಕಿದೆ. ನಾನು, ನನ್ನ ಕುಟುಂಬ ಶ್ರಮಪಟ್ಟಿದ್ದಕ್ಕೂ ಸಾರ್ಥಕ ಎನಿಸಿದೆ.

| ಬಿ.ಬಿ. ಬಸವರಾಜು ರೇಷ್ಮೆ ಬೆಳೆಗಾರ ರೈತ, ಕೆಸ್ತೂರು

Vijayavani pg 03

ವಿ ರೈತ ಮಿತ್ರ



■ ಪಾಲಿಹೌಸ್ ಛಾವಣಿಯ ಮೂಲಕ ಮಳೆ ನೀರು ಕೊಯ್ಲು ಮಾಡುವ ಬಗ್ಗೆ ಮಾಹಿತಿ ನೀಡಿ.


| ಪ್ರೀತಮ್ ಆನೇಕಲ್

ಪಾಲಿಹೌಸ್ ಛಾವಣಿಯ ಮೇಲೆ ಬೀಳುವ ಮಳೆ ನೀರನ್ನು ಅನಗತ್ಯವಾಗಿ ವ್ಯರ್ಥಮಾಡದೆ ಗಟರ್ ಮತ್ತು ಡೌನ್‌ಪೈಪ್ ಬಳಸಿ ಶೇಖರಣಾ ತೊಟ್ಟಿಯಲ್ಲಿ ಶೇಖರಿಸಿ ತದನಂತರ ಸಂರಕ್ಷಿತ ಕೃಷಿಗಾಗಿ ಉಪಯೋಗಿಸಬಹುದು. ಪಾಲಿಹೌಸ್‌ನ ವಿಸ್ತೀರ್ಣಕ್ಕೆ ಅನುಗುಣವಾಗಿ ಶೇಖರಣಾ ತೊಟ್ಟಿಯನ್ನು ಆರ್‌ಸಿಸಿಯಿಂದ ನಿರ್ಮಿಸಿಕೊಳ್ಳುವುದು ಸೂಕ್ತ. ಕೊಯ್ಲು ಮಾಡಿದ ಮಳೆ ನೀರನ್ನು ಹನಿ ನೀರಾವರಿ ಮೂಲಕ ಬೆಳೆಗಳಿಗೆ ಬಳಕೆ ಮಾಡಬಹುದು. ಇದರ ಜತೆಗೆ ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಬಳಸಿ ಹೆಚ್ಚಿನ ಮೌಲ್ಯದ ಬೆಳೆಗಳಾದ ತಿಂಗಳ ಹುರುಳಿ, ಬದನೆ, ಬ್ರೊಕೊಲಿ, ಕ್ಯಾಪ್ಸಿಕಂ, ಫ್ಲೋಲ್ ಬೀನ್ಸ್, ಚೆರ್ರಿ, ಟೊಮ್ಯಾಟೊ, ಲೆಟ್ಯುಸ್, ಪಾಲಾಕ್, ಇತರ ತರಕಾರಿ, ಸೊಪ್ಪುಗಳ ಇಳುವರಿ ಹೆಚ್ಚಿಸಬಹುದು. ಈ ತಂತ್ರಜ್ಞಾನವು ವಿಶೇಷವಾಗಿ ಒಣ ಭೂಮಿ ಪ್ರದೇಶಗಳಲ್ಲಿ ಬೆಳೆಗಳನ್ನು ಬೆಳೆಯಲು ಬಹಳ ಉಪಯುಕ್ತ.

| ಡಾ. ಕೆ.ಪಿ.ರಘುಪ್ರಸಾದ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani pg 07



ಸಹಜ ಕೃಷಿಯಲ್ಲಿ ರಾಘವ ಋಷಿ

ಉಳುಮೆಯೇ ಇಲ್ಲದೆ, ಕಳೆ ಕೀಳದೆ ಕೃಷಿ ಮಾಡಲು ಸಾಧ್ಯವೇ? ಏನಿದು ವಿಚಿತ್ರ ಪ್ರಶ್ನೆ ಎಂದು ಕೇಳಬಹುದು. ಸಹಜ ಕೃಷಿಯ ಲಕ್ಷಣವೇ ಅದು. ರಾಸಾಯನಿಕ ಗೊಬ್ಬರ, ತಿಪ್ಪೆಗೊಬ್ಬರದ ಸ್ಪರ್ಶವೂ ಇಲ್ಲದೆ, ಕೀಟನಾಶಕ ಬಳಸದೆ ಮಾಡುವ ವೈವಸಾಯ ಪದ್ಧತಿ ಇದು. ಜಪಾನ್ ರೈತ ಫುಕುವೋಕಾ ಪ್ರತಿಪಾದಿಸಿದ ಈ ಪದ್ಧತಿ 'ಸಹಜ ಕೃಷಿ' (ನ್ಯಾಚುರಲ್ ಫಾರ್ಮಿಂಗ್) ಎಂದೇ ಪರಿಚಿತ.

ಹರಿಹರ ತಾಲೂಕಿನ ಮಲ್ಲನಾಯ್ಕನಹಳ್ಳಿ ಬಳಿಯ 'ಏಕಾಂತಿಕ' ಎಂಬ ಪ್ರದೇಶದಲ್ಲಿ ಈ ಪರಿಕಲ್ಪನೆಯನ್ನು ಅನುಷ್ಠಾನಕ್ಕೆ ತಂದವರು ಸಹಜ ಕೃಷಿಕ ರಾಘವ. 35 ಎಕರೆ ಜಮೀನಿನಲ್ಲಿ ಕ್ಷಾಂತಿಯನ್ನೇ ಮಾಡಿದ್ದಾರೆ. ಸಹಜ ಕೃಷಿಯನ್ನು 'ಡು ನಥಿಂಗ್ ಫಾರ್ಮಿಂಗ್' ಎನ್ನಲಾಗುತ್ತದೆ. ಏನೂ ಮಾಡುವುದು ಬೇಡ ಎಂಬುದು ಅದರ ಅರ್ಥವಲ್ಲ. ನೈಸರ್ಗಿಕ ಜೀವ ವೈವಿಧ್ಯದ ನಡುವೆ ತನ್ನಿಂದ ತಾನೇ ಆರಳುವ ಸಹಜ ಕ್ರಿಯೆ ಇದು. ಉಳುಮೆ ಬೇಡ, ರಸಗೊಬ್ಬರ, ತಿಪ್ಪೆಗೊಬ್ಬರದ ಸಹವಾಸವಿದೂ ದೂರ. ಕೀಟನಾಶಕದ ಮಾತೇ ಬೇಡ. ಕಳೆ ನಿರ್ಮೂಲನೆ ಇಲ್ಲಿ ನಿಷಿದ್ಧ.



ಹಸಿರು ಸೃಷ್ಟಿಸಿ ಪ್ರಕೃತಿ ಆರಾಧಿಸುವ ಸಾಧಕ

ವಿಭಿನ್ನ ಪರಿಸರ

ಏಕಾಂತಿಕ ಹೆಸರಿನ ಜಮೀನಿಗೆ ಕಾಲಿಟ್ಟರೆ ಕಾಡಿನೊಳಗೆ ಹೊಕ್ಕಂತೆ ಭಾಸವಾಗುತ್ತದೆ. ಬಣ್ಣ ಬಣ್ಣದ ಹೂವುಗಳು, ಚಿಟ್ಟೆಗಳ ಹಾರಾಟ ಕಂಡಾಗ ಉದ್ಯಾನದಲ್ಲಿರುವಂತೆ ಅನಿಸುತ್ತದೆ. ಹುಲ್ಲು, ಬಳ್ಳಿಯ ಹಾಸಿನ ಕೆಳಗೆ ಫಲವತ್ತಾದ ಮಣ್ಣಿದೆ. ಸುತ್ತಲೂ ಬೆಳೆದ ಗಿಡ ಮರಗಳ ಮೇಲೆ ಬೀಳುವ ಮಳೆ ಹಂತ ಹಂತವಾಗಿ ಭೂಮಿಗಿಳಿದು ಇಂಗುತ್ತದೆ.

ಕೃಷಿಗೆ ಬೇಕಾಗುವ ಸಾರಜನಕ ನೈಸರ್ಗಿಕವಾಗಿಯೇ ಅಲ್ಲಿನ ಪರಿಸರದಲ್ಲಿ ಬೆರೆತಿದೆ. 74 ಪ್ರಕಾರದ ಚಿಟ್ಟೆಗಳು, 65 ಬಗೆಯ ಪಕ್ಷಿಗಳು ಇಲ್ಲಿವೆ. ರಾಘವ ಅವರ ಪ್ರಕಾರ ದೇಹದ 3 ಹಾಗೂ 4ನೇ ಅತಿದೊಡ್ಡ ಚಿಟ್ಟೆಗಳು ಇಲ್ಲಿವೆಯಂತೆ. ಇವರ ಜಮೀನಿಗೆ ಬೋರ್ ಲಾರಿ ಒಮ್ಮೆಯೂ ಬಂದಿಲ್ಲವಂತೆ! ಮಳೆ ನೀರಿನ ಒಂದೊಂದು ಹನಿಯೂ ವ್ಯರ್ಥವಾಗದೆ ಭೂಮಿ ನೇರುವುದರಿಂದ ಈ ಪ್ರದೇಶ ಆಕ್ಷಯ ಜಲಪಾತ್ರೆಯಾಗಿದೆ. ಇಲ್ಲಿನ ಬಾವಿಯಲ್ಲಿ ಕೈಗೆ ನಿಲುಕುವ ಮಟ್ಟದಲ್ಲಿ ನೀರಿದೆ. ಎಂಥ ಬರಗಾಲದಲ್ಲೂ ಇಲ್ಲಿನ ಗಿಡಗಳು ಸಾಯುವುದಿಲ್ಲವಂತೆ.

ಬೆಳೆ ವೈವಿಧ್ಯ

ತೋಟ ಮತ್ತು ಗದ್ದೆ ಎರಡೂ ಸಮೃದ್ಧವಾಗಿವೆ. ಹಸಿರಿನ ನಡುವೆ ನೋಡುತ್ತ ಹೋದರೆ ವೈವಿಧ್ಯಮಯ ಗಿಡ ಮರಗಳು ಎದುರಾಗುತ್ತವೆ. ಸೀತಾಫಲ, ಲಕ್ಷ್ಮಣ ಫಲ, ರಾಮ ಫಲ ಹೀಗೆ ರಾಮಾಯಣ ಕುಟುಂಬವೇ ಇಲ್ಲಿದೆ ಎನ್ನುತ್ತಾರೆ ರಾಘವ. ರೋಸ್ ಆ್ಯಪಲ್, ಮಲಿಯಾ ಆ್ಯಪಲ್, ಬಗೆ ಬಗೆಯ ಬಾಳೆ, ಅಲಂಕಾರಿಕ ಹೂವುಗಳು, ಕೊಡಗಿನ ತತ್ತೆಳೆ, ಮೋಸಂಬಿ, ವಾಟರ್ ಆ್ಯಪಲ್, ಆರಿಷಿಣ, ಕಸ್ತೂರಿ, ತುಳಸಿ ಸೇರಿ ಔಷಧೀಯ ಸಸ್ಯಗಳು ಹೇರಳವಾಗಿವೆ. ಲಿಚ್ಚಿ, ಸ್ಟಾರ್ ಫ್ರೂಟ್, ಕೋಕೋ ಫ್ರೂಟ್, ಲಾಕೋಟ್ ಗಿಡ, ಸಿಲ್ಕ್ ಕಾಟನ್, ಚಕ್ರಮುನಿ ಸೊಪ್ಪು, ಜಂಬು ನೇರಳೆ, ಬ್ರೆಜಿಲ್‌ನ ಅಲಂಕಾರಿಕ ಬಾಳೆ, ಬ್ರೆಡ್ ಫ್ರೂಟ್, ಬೆಟ್ಟದ ನೆಲ್ಲಿ, ಪೈನಾಪಲ್, ಚಕ್ಕೋತಾ ಹೀಗೆ ಪಟ್ಟಿ ಬೆಳೆಯುತ್ತದೆ. ಜಮೀನಿನ ಇನ್ನೊಂದು ಬದಿಯಲ್ಲಿ ಭತ್ತ ಬೆಳೆಯುತ್ತಾರೆ. ಕೆಂಪು, ಕಪ್ಪು ಅಕ್ಕಿಯನ್ನೂ ಬೆಳೆಯುವುದು ವಿಶೇಷ.

ಪುಕುವೋಕಾ ಪ್ರಭಾವ

ರಾಘವ ಅವರು 1996ರಲ್ಲಿ ಕೃಷಿ ಆರಂಭಿಸಿದಾಗ ಈ ಕ್ಷೇತ್ರ ಹೊಸ ದಾಗಿತ್ತು. ಸಹಜ ಕೃಷಿ ಕುರಿತ ಕಾರ್ಯಾಗಾರಗಳಲ್ಲಿ ಭಾಗವ ಹಿಸಿದ ನಂತರ ಅವರಲ್ಲಿ ಸಾಕಷ್ಟು ಬದಲಾವಣೆಯಾಯಿತು. ಫುಕುವೋಕಾ ಅವರ ವಿಚಾರಗಳಿಂದ ಪ್ರಭಾವಿತರಾದರು. ಅವರ 'ಒಂದು ಹುಲ್ಲಿನ ಕ್ರಾಂತಿ' ಕೃತಿ ಓದಿದ ನಂತರ ಸಹಜ ಕೃಷಿಯ ಒಲವು ಬೆಳೆಸಿಕೊಂಡರು. ಅದಕ್ಕೂ ಮೊದಲು ಅವರ ಹಿರಿಯರು ತೆಂಗು ಕೃಷಿ ಮಾಡುತ್ತಿದ್ದರು. ಹೆಚ್ಚಿನ ಸಾಧನೆ ಮಾಡಬೇಕೆಂಬ ತುಡಿತ ಅವರಲ್ಲಿ ಉಂಟಾ ಯಿತು. ಅನೇಕ ಸಾವಯವ ರೈತರನ್ನು ಭೇಟಿ ಮಾಡಿದರು. ಆರಂಭದ ದಿನಗಳಲ್ಲಿ ಯಶಸ್ಸು ಕಾಣಲಿಲ್ಲ. ಸಹಜ ಕೃಷಿಯ ಜ್ಞಾನ ಪಡೆದ ಮೇಲೆ ಹಿಂತಿರುಗಿ ನೋಡಲೇ ಇಲ್ಲ.

ಸರಳ ಜೀವನ

ಆಧುನಿಕತೆಯಿಂದ ದೂರವಿರುವ ರಾಘವ ಅವರ ಬದುಕೂ ಅತ್ಯಂತ ಸರಳ. ಜಮೀನಿನಲ್ಲೇ ಮಣ್ಣಿನ ಮನೆ ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಪತ್ನಿ, ಪುತ್ರಿ, ಪುತ್ರ ಸಾಥ್ ನೀಡಿದ್ದಾರೆ. 'ಪ್ರಕೃತಿಗೆ ಹೊಂದಿಕೊಂಡು ಜೀವನ ಸಾಗಿಸಬೇಕು. ಸಹಜ ಕೃಷಿಯಲ್ಲಿ ನೆಮ್ಮದಿ ಇದೆ. ಇಲ್ಲಿ ಬೆಳೆದ ಬೆಳೆಗಳನ್ನು ನೇರವಾಗಿ ಗ್ರಾಹಕರಿಗೆ ತಲುಬಿಸುತ್ತೇವೆ' ಎನ್ನುತ್ತಾರೆ ರಾಘವ.

Vijayavani pg 06

ಗೃಹಿಣಿಯ ಬದುಕು ಬದಲಿಸಿದ ಅಣಬೆ ಕೃಷಿ

15 ಮಂದಿಗೆ ಉದ್ಯೋಗ ನೀಡಿದ ಸಾಧಕಿ | ಹೋಟೆಲ್‌ಗಳಿಗೆ ಪೂರೈಕೆ

■ ಆರ್. ತುಳಸಿಕುಮಾರ್ ಬೆಂಗಳೂರು

ಮನೆಯಲ್ಲಿ ಗೃಹಕೃತ್ಯ ಮುಗಿಸಿ ಬಿಡುವಿನ ವೇಳೆಯಲ್ಲಿ ತಾರಸಿ ತೋಟ ಆರಂಭಿಸಿದ ಆಕೆ, ಅಡುಗೆಗೆ ಸಾವಯವ ತರಕಾರಿ ಬಳಸುವುದನ್ನು ರೂಢಿಸಿಕೊಂಡರು. ಕಡಿಮೆ ಖರ್ಚಿನಲ್ಲಿ ಹೆಚ್ಚು ಪೌಷ್ಟಿಕಾಂಶ, ಗುಣಮಟ್ಟದ ಉತ್ಪನ್ನ ಆರೋಗ್ಯಪೂರ್ಣ ಬದುಕಿಗೆ ಆಸರೆ ಎಂಬುದನ್ನು ಕಂಡುಕೊಂಡರು. ಇದರಿಂದ ಪ್ರೇರಿತರಾಗಿ ಪರಿಸರಸ್ನೇಹಿ ಉದ್ಯಮ ಸ್ಥಾಪಿಸಬೇಕೆಂಬ ಛಲದೊಂದಿಗೆ ಆರಂಭಿಸಿದ ಅಣಬೆ ನವೋದ್ಯಮದಿಂದ ಯಶಸ್ಸಿ ಉದ್ಯಮಿಯಾಗಿ ಹೊರಹೊಮ್ಮಿದ್ದಾರೆ.

ಮೊದ ಮೊದಲು ಆದಾಯ ಕೈಸೇರದೆ ಹೂಡಿದ ಹಣ ವಾಪಸ್ ಬರುವುದೇ ಎಂಬ ಅನುಮಾನ ಕಾಡಿತ್ತು. ಆದರೆ, ನಿರಂತರ ಪರಿಶ್ರಮ, ಕೆಲಸದ ಮೇಲಿನ ಶ್ರದ್ಧೆ, ಗುಣಮಟ್ಟದ ಮಶ್ರೂಮ್ ಬೆಳೆಯಲು ಆದ್ಯತೆ, ಗ್ರಾಹಕರು ಕೋರುವ ತರೇಹವಾರಿ ಅಣಬೆಗಳನ್ನು ಪೂರೈಕೆ ಮಾಡುತ್ತಿದ್ದಂತೆ ಸ್ಟಾರ್ ಹೋಟೆಲ್‌ಗಳಿಗೂ ಪೂರೈಸುವಷ್ಟರ ಮಟ್ಟಿಗೆ ನಮ್ರತಾ ಅವರಿಗೆ ನವೋದ್ಯಮ ನಸೀಬು ತಂದುಕೊಟ್ಟಿತು.

ಮೂಲತಃ ಪಶ್ಚಿಮ ಬಂಗಾಳದ ನಮ್ರತಾ, ಬೆಂಗಳೂರಿನ ವ್ಯಕ್ತಿಯೊಂದಿಗೆ ಮದುವೆಯಾಗಿ ಇಲ್ಲಿಯೇ ನೆಲೆಸಿದರು. ಎಲ್‌ಎಲ್‌ಬಿ ಓದಿದರೂ ಪರಿಸರಸ್ನೇಹಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬ ಆಸೆಯಿಂದಾಗಿ ಅಣಬೆ ಬೆಳೆಯಲು ಆರಂಭಿಸಿದರು. ಏಳು ವರ್ಷದ ಹಿಂದೆ ವಿದ್ಯಾರಣ್ಯಪುರದಲ್ಲಿ 10x10 ಅಡಿ ವಿಸ್ತೀರ್ಣದ ಮಳಿಗೆಯಲ್ಲಿ ಮಶ್ರೂಮ್ ಬೆಳೆದು ಮಾರಾಟ ಮಾಡಿದರು. ಕುಟುಂಬದವರ ಪ್ರೋತ್ಸಾಹದಿಂದ 'ಗ್ರೀನ್ ಏಪ್ರಾನ್ ಫಾರ್ಮ್ಸ್' ಹೆಸರಿನ ನವೋದ್ಯಮ ಆರಂಭಿಸಿದರು. ಗ್ರಾಹಕರ ವಿಶ್ವಾಸ ಗಳಿಸಿದ ಪರಿಣಾಮ ಉದ್ಯಮ ಲಾಭದತ್ತ ಹೊರಳಿತು. ಒಂದೆರಡು ವರ್ಷದ ಹಿಂದೆ ದೇವನಹಳ್ಳಿ ಬಳಿ ಒಂದು ಎಕರೆ ಜಮೀನು ಖರೀದಿಸಿ, ದೊಡ್ಡ ಮಟ್ಟದಲ್ಲಿ ಅಣಬೆ ಬೇಸಾಯ ವಿಸ್ತರಣೆ ಮಾಡಿಕೊಂಡಿದ್ದಾರೆ.



ನಗರದಲ್ಲಿ ನಡೆದಿರುವ ಜಾಗತಿಕ ಅಣಬೆ ಸಮ್ಮೇಳನದ ಮಳಿಗೆಯಲ್ಲಿ ತಾವು ಬೆಳೆಸಿರುವ ತರೇಹವಾರಿ ಮಶ್ರೂಮ್‌ಗಳೊಂದಿಗೆ ಪಾಲ್ಗೊಂಡಿದ್ದ ನಮ್ರತಾ.

ಎಂಎಸ್ಸಿ ಪದವೀಧರೆ: ನಮ್ರತಾ ಅವರು ಎಂಎಸ್ಸಿ ಪದವಿ ಪೂರೈಸಿದ್ದಾರೆ. ಖಾಸಗಿ ಕಂಪನಿಯ ಕರೆಗೆ ಸ್ಪಂದಿಸದೆ ಸ್ವಯಂ ಉದ್ಯೋಗದ ಬೆನ್ನ ಹತ್ತಿದ ಪರಿಣಾಮ ನವೋದ್ಯಮ ಲಾಭದತ್ತ ಮುನ್ನಡೆದಿದೆ. ಪ್ರಸ್ತುತ 15 ಮಂದಿಗೆ ಕೆಲಸ ನೀಡಿ ಯಶಸ್ವಿ ಉದ್ಯಮಿಯಾಗಿರುವ ಜತೆಗೆ ಉದ್ಯೋಗದಾತೆಯೂ ಆಗಿದ್ದಾರೆ. ಗೃಹಿಣಿಯರಿಗೆ ಅವಕಾಶ ಹಾಗೂ ಪ್ರೋತ್ಸಾಹ ಸಿಕ್ಕಿದರೆ ಆಕೆ ಮನೆಯಷ್ಟೇ ಉದ್ಯಮವನ್ನು ಯಶಸ್ವಿಯಾಗಿ ಮುನ್ನಡೆಸಬಲ್ಲಳು. ಇದಕ್ಕೆ ಸರ್ಕಾರ ಕೂಡ ಹೂಡಿಕೆಸ್ನೇಹಿ ಯೋಜನೆಗಳನ್ನು ಮಹಿಳೆಯರಿಗಾಗಿ ರೂಪಿಸಬೇಕು ಎಂಬುದು ನಮ್ರತಾ ಅವರ ಒತ್ತಾಯವಾಗಿದೆ.

ಪರಿಸರದ ಮೇಲಿನ ಪ್ರೀತಿಯಿಂದಾಗಿ ಪರಿಸರಸ್ನೇಹಿ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದೇನೆ. ಆರಂಭದಲ್ಲಿ ಸಾಕಷ್ಟು ಕಷ್ಟ, ನಷ್ಟವಾಲು ಎದುರಾದವು. ಹೂಡಿಕೆ ಮಾಡಲು ಹಣ ಸಿಗದೆ ಪರದಾಡಿದ್ದೇವೆ. ಅಣಬೆ ನವೋದ್ಯಮಕ್ಕೆ ಸರ್ಕಾರದ ಸಬ್ಸಿಡಿ ಇಲ್ಲವೆಂದು ಕೇಳಿ ಅಚ್ಚರಿಗೊಂದಿರುವೆ. ಸ್ತ್ರೀ ನವೋದ್ಯಮ ಬೆಳೆಸಲು ಎಲ್ಲ ರೀತಿಯ ಪ್ರೋತ್ಸಾಹವನ್ನು ಸರ್ಕಾರ ಒದಗಿಸಬೇಕು.

| ನಮ್ರತಾ ಅಣಬೆ ಉದ್ಯಮಿ

ಉದ್ಯಮಕ್ಕಿಲ್ಲ ಸಬ್ಸಿಡಿ ಬಲ

ಸರ್ಕಾರ ಐಟಿ-ಬಿಟಿ, ತಂತ್ರಜ್ಞಾನ ಸಹಿತ ಕೃಷಿ ನವೋದ್ಯಮಗಳಿಗೆ ಸಬ್ಸಿಡಿ ಆಧಾರಿತ ಕೆಲ ಯೋಜನೆ ಗಳನ್ನು ರೂಪಿಸಿದೆ. ಆದರೆ, ಅಣಬೆ ನವೋದ್ಯಮಕ್ಕೆ ಸಬ್ಸಿಡಿ ನೀಡುತ್ತಿಲ್ಲ. ಅಣಬೆ ಕೃಷಿಯ ಭಾಗವಾಗಿ ಪರಿಗಣಿಸದ ಕಾರಣ ಈ ಸಮಸ್ಯೆ ಎದುರಾಗಿದೆ. ಯುವಜನತೆಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಹಾಗೂ ವಿದ್ಯಾವಂತರಲ್ಲದ ವರಿಗೂ ಸಾಕಷ್ಟು ಉದ್ಯೋಗ ಒದಗಿಸಬಲ್ಲ ಅಣಬೆ ಬೇಸಾಯ/ ನವೋದ್ಯಮಕ್ಕೂ ಸಬ್ಸಿಡಿ ಅನ್ವಯಿಸಬೇಕು ಎನ್ನತ್ತಾರೆ ಕೃಷಿ ತಜ್ಞರು.

ಕೃಷಿ ವಿವಿಯಿಂದ ತರಬೇತಿ

ಬೆಂಗಳೂರು ಕೃಷಿ ವಿವಿ ಯುವಜನರಿಗೆ ಅಣಬೆ ಬೇಸಾಯದಲ್ಲಿ ತೊಡಗಿಸಿಕೊಳ್ಳಲು ಬೇಕಾದ ನೈಪುಣ್ಯ ಸೇರಿ ವಿವಿಧ ಅನುಭವ ನೀಡುವ ಅಲ್ಪಾವಧಿ ಕೋರ್ಸ್ ಆರಂಭಿಸಿದೆ. ಎಸ್ಸೆಸ್ಸೆಲ್ಸಿ ಓದಿದವರೂ ಈ ತರಬೇತಿಯಲ್ಲಿ ಪಾಲ್ಗೊಳ್ಳಬಹುದು. ಸ್ವಂತ ಉದ್ಯೋಗ ಆರಂಭಿಸಲು ಹೆಚ್ಚಿನ ಅವಕಾಶವಿರುವ ಈ ಕ್ಷೇತ್ರದಲ್ಲಿ ಮುಂದುವರಿಯಲು ಉಜ್ವಲ ಭವಿಷ್ಯವಿದೆ. ಉದ್ಯಮ ಆರಂಭಿಸುವವರಿಗೆ ವಿವಿಯಿಂದ ಎಲ್ಲ ರೀತಿಯ ಮಾರ್ಗದರ್ಶನ ಸಿಗಲಿದೆ ಎನ್ನುತ್ತಾರೆ ಕೃಷಿ ವಿವಿಯ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎನ್. ಉಮಾಶಂಕರ್.

ಜಿಐ ಟ್ಯಾಗ್‌ನಲ್ಲೂ ಕರುನಾಡ ಹಿರಿಮೆ



ಕಲೆ, ಕುಸುರಿ, ಬೆಳೆಯಲ್ಲಿ ಸ್ಥಳೀಯ ಸೊಗಡು

Vijayavani Pg 09

ಯಾವುದೇ ವಸ್ತುವಿನ ಪ್ರದೇಶವಾರು ಮಾನ್ಯತೆಯನ್ನು ನಿರ್ಣಯಿಸುವಲ್ಲಿ ಅಲ್ಲಿನ ಪ್ರಸಿದ್ಧ ಅಂಶಗಳು ಪ್ರಧಾನ ಪಾತ್ರ ವಹಿಸುತ್ತವೆ. ಅಂತೆಯೇ ಭೌಗೋಳಿಕ ಗುರುತು ನೋಂದಣಿ ಅಧಿಕಾರಿಗಳು ನೀಡುವ ಜಿಯೋಗ್ರಫಿಕಲ್ ಇಂಡಿಕೇಶನ್ ಟ್ಯಾಗ್ (ಜಿಐ ಟ್ಯಾಗ್) ಸಂಬಂಧಪಟ್ಟ ಪ್ರದೇಶದ ಉತ್ಪನ್ನಕ್ಕೆ ಅಧಿಕೃತ ಮಹತ್ವವನ್ನು ಒದಗಿಸುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ತನ್ನ 46 ಉತ್ಪನ್ನಗಳಿಗೆ ಜಿಐ ಟ್ಯಾಗ್ ಹೊಂದಿದ್ದು, ಕೃಷಿ, ಕಲೆ, ಆಹಾರ, ಬಟ್ಟೆ, ಆಟಿಕೆ, ಅಲಂಕಾರಿಕ ವಸ್ತುಗಳು ಈ ಗೌರವ ಪಡೆದುಕೊಂಡಿವೆ. ಅಂತಹ ಗುರುತು ನಮ್ಮ ಕನ್ನಡದ ಸೊಗಡಿನ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸಲು ಪೂರಕವಾಗಿದೆ.

ಸಾಮಾನ್ಯವಾಗಿ ಯಾವುದೇ ಪ್ರಸಿದ್ಧವಾದ ವಸ್ತುವಿಗೆ ನಕಲಿ ಉತ್ಪನ್ನಗಳು ದೊಡ್ಡ ಸವಾಲಾಗಿರುತ್ತವೆ. ಪ್ರದೇಶವಾರು ಹೆಸರನ್ನು ದುರ್ಬಳಕೆ ಮಾಡಿಕೊಂಡು ಮಾರುಕಟ್ಟೆಯಲ್ಲಿ ಗ್ರಾಹಕರನ್ನು ದಿಕ್ಕು ತಪ್ಪಿಸುವುದು ಹಾಗೂ ನೈಜ ಉತ್ಪಾದಕರಿಗೆ ನಷ್ಟ ಉಂಟು ಮಾಡುವುದನ್ನು ತಪ್ಪಿಸಲು ಜಿಐ ಟ್ಯಾಗ್ ನೀಡಲಾಗುತ್ತದೆ. ಇದು ಉತ್ಪನ್ನದ ಗುರುತು ಮಾತ್ರವಲ್ಲದೆ ಆ ಪ್ರದೇಶದ ಸಂಸ್ಕೃತಿ, ಸಂಪ್ರದಾಯ ಮತ್ತು ಪರಂಪರೆಯ ಪ್ರತೀಕ ಕೂಡ ಆಗಿರುತ್ತದೆ.

ದೇಶಾದ್ಯಂತ ಮನೆಮಾತು: ಜಿಐ ಟ್ಯಾಗ್‌ನ ಹೆಗ್ಗಳಿಕೆ ಸಿಕ್ಕಿದ್ದು ಇತ್ತೀಚೆಗೆ. ಆದರೆ ಈ ಮಾನ್ಯತೆಯ ಹೊರತಾಗಿಯೂ ಕನ್ನಡ ನಾಡಿನ ಹಲವು ವಸ್ತುಗಳು ದೇಶಾದ್ಯಂತ ಮನೆಮಾತಾಗಿವೆ. ಅಂಥವುಗಳಲ್ಲಿ ವಿವಿಧ ಬೆಳೆಗಳು, ಕರಕುಶಲ ವಸ್ತುಗಳು ಸೇರಿವೆ. ಬ್ಯಾಡಗಿ ಮೆಣಸು, ಕರಾವಳಿಯ ಕರಿಮೆಣಸು ಮುಂತಾದವು ರಾಜ-ಮಹಾರಾಜರ ಕಾಲದಿಂದಲೂ ಬಹಳ ಪ್ರಸಿದ್ಧಿ ಪಡೆದಿರುವ ವಸ್ತುಗಳು. ವಿದೇಶಿಗರು ಕನ್ನಡದ ದೊರೆಗಳೊಂದಿಗೆ ಸಾಂಬಾರ ಪದಾರ್ಥಗಳ ವ್ಯಾಪಾರ ವಹಿವಾಟನ್ನು ಹೊಂದಿದ್ದರು. ತೊಗರಿ ಕಣಜ ಎಂದೇ ಪ್ರಸಿದ್ಧವಾಗಿರುವ ಕಲಬುರಗಿಯ ತೊಗರಿಬೇಳೆ ಬಹಳ ಪ್ರಸಿದ್ಧಿ ಪಡೆದಿದೆ. ಉಡುಪಿಯಲ್ಲಿ ತಯಾರಾಗುವ ಹತ್ತಿಬಟ್ಟೆಯ ಸೀರೆ ಜನಸಾಮಾನ್ಯರಲ್ಲಿ ಮಾತ್ರವಲ್ಲದೆ ಹಲವು ಖ್ಯಾತನಾಮರಿಗೂ ಅಚ್ಚುಮೆಚ್ಚು. ಇಳಕಲ್ ಸೀರೆ ಇಡೀ ದೇಶದಲ್ಲಿ ಪ್ರಸಿದ್ಧವಾಗಿದ್ದು, ಉತ್ತರ ಕರ್ನಾಟಕದ ಸಂಸ್ಕೃತಿಯ ಭಾಗವಾಗಿದೆ. ಬಿದರಿ ವೇರ್, ಕಂಚಿನ ಕಲಾಕೃತಿ ಮತ್ತಿತರ ಕರಕುಶಲ ವಸ್ತುಗಳಿಗೆ ಹೊರದೇಶಗಳ ಮಾರುಕಟ್ಟೆಗಳಲ್ಲಿ ಭಾರಿ ಬೇಡಿಕೆ ಇದೆ.

ಮೈಸೂರು ಸ್ಯಾಂಡಲ್ ಸೋಪು ಇಡೀ ಜಗತ್ತಿನಲ್ಲಿ ಪ್ರಸಿದ್ಧವಾಗಿದೆ. ಶತಮಾನದ ಇತಿಹಾಸವಿರುವ ಮೈಸೂರು ಸ್ಯಾಂಡಲ್ ಸೋಪನ್ನು ಬಳಸುವ ಲಕ್ಷಾಂತರ ಗ್ರಾಹಕರು ಹೊರರಾಜ್ಯಗಳಲ್ಲಿಯೂ, ವಿದೇಶಗಳಲ್ಲಿಯೂ ಇದ್ದಾರೆ. ಮೈಸೂರು ಸ್ಯಾಂಡಲ್ ಅಗರಬತ್ತಿ, ಮೈಸೂರು ಶ್ರೀಗಂಧದ ಎಣ್ಣೆ ಕೂಡ ಅಷ್ಟೇ ಪ್ರಸಿದ್ಧವಾಗಿದ್ದು ಕನ್ನಡನಾಡು ಶ್ರೀಗಂಧದ ಬೀಡು ಎಂಬ ಅನ್ವರ್ಥಕ್ಕೆ ಪೂರಕವಾಗಿವೆ.

ಬಾಯಲ್ಲಿ ನೀರು ತರಿಸುವ ಪದಾರ್ಥಗಳು: ಅಪ್ಪೆಮಿಡಿ ಉಪ್ಪಿನಕಾಯಿ ಬಹಳಷ್ಟು ಜನರ ಪ್ರಿಯ ಪದಾರ್ಥ. ಮಲೆನಾಡಿನಲ್ಲಿ ದೊರೆಯುವ ಅಪ್ಪೆಮಿಡಿಗಾಗಿ ಬಹುದೂರದಿಂದ ಬರುವವರಿದ್ದಾರೆ. ಇತ್ತೀಚೆಗೆ ಆನ್‌ಲೈನ್ ಖರೀದಿ ಆರಂಭವಾದ ನಂತರ ಹೊರ ರಾಜ್ಯಗಳಿಂದಲೂ ಅಪ್ಪೆಮಿಡಿಗೆ ಬೇಡಿಕೆ ಸೃಷ್ಟಿಯಾಗಿದೆ. ನಂಜನಗೂಡಿನ ರಸಬಾಳೆ ಜನಪದ ಸಾಹಿತ್ಯದಲ್ಲೂ ಪ್ರಸಿದ್ಧವಾಗಿದೆ. ಚಿಕ್ಕಮಗಳೂರು ಎಂದರೆ ಕಾಫಿ, ಕಾಫಿ ಎಂದರೆ ಚಿಕ್ಕಮಗಳೂರು ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧವಾಗಿದೆ. ಅಕ್ಕಪಕ್ಕದ ಹಲವು ಜಿಲ್ಲೆಗಳಲ್ಲಿಯೂ ಕಾಫಿ ಬೆಳೆಯಲಾಗುತ್ತದೆ. ಧಾರವಾಡ ಪೇಡಾ ಎಂದಾಗ ಬಾಯಲ್ಲಿ ನೀರೂರುವುದು ಸಹಜ. ಈ ಎಲ್ಲ ಪದಾರ್ಥಗಳಿಗೂ ಜಿಐ ಟ್ಯಾಗ್ ಹೆಗ್ಗಳಿಕೆ ಇದೆ.

ಜಿಐ ಟ್ಯಾಗ್ ಹೊಂದಿರುವ ರಾಜ್ಯದ ಉತ್ಪನ್ನಗಳು

ಅಪ್ಪೆಮಿಡಿ, ಚಿಕ್ಕಮಗಳೂರು ಕಾಫಿ, ಇಂಡಿ ನಿಂಬೆಹಣ್ಣು, ಮೈಸೂರು ವೀಳ್ಯದೆಲೆ, ಧಾರವಾಡ ಪೇಡ, ನಂಜನಗೂಡು ಬಾಳೆಹಣ್ಣು, ಮೈಸೂರು ಮಲ್ಲಿಗೆ, ಕಮಲಾಪುರ ಕೆಂಪು ಬಾಳೆಹಣ್ಣು, ಉಡುಪಿಯ ಮಲ್ಲಿಗೆ, ಶಿರಸಿಯ ಸುಪಾರಿ, ಉಡುಪಿಯ ಗುಳ್ಳ ಬದನೆಕಾಯಿ, ಹಡಗಲಿಯ ಮಲ್ಲಿಗೆ, ಕಲಬುರಗಿಯ ತೊಗರಿ, ಕೊಡಗಿನ ಕಿತ್ತಳೆ, ಹಸಿರು ಏಲಕ್ಕಿ, ಬ್ಯಾಡಗಿ ಮೆಣಸಿನಕಾಯಿ, ಬೆಂಗಳೂರಿನ ಗುಲಾಬಿ ಈರುಳ್ಳಿ, ನೀಲಿ ದ್ರಾಕ್ಷಿ, ದೇವನಹಳ್ಳಿಯ ಚಕ್ಕೋತಾ, ಬಿದರಿ ಕಲೆಯ ವಸ್ತುಗಳು, ಚನ್ನಪಟ್ಟಣದ ಮತ್ತು ಕಿನ್ನಾಳದ ಗೊಂಬೆಗಳು, ಮೈಸೂರಿನ ಸಿಲ್ಕ್, ಗಂಜೀಫಾ ಕಾರ್ಡ್, ರೋಸ್‌ವುಡ್ ಕಲಾಕೃತಿ, ಗುಳೇದಗುಡ್ಡದ ಖಣ (ಸೀರೆ), ಇಳಕಲ್ ಸೀರೆ, ಆಥಣಿಯ ಕೊಲ್ಹಾಪುರಿ ಚಪ್ಪಲಿ, ಮೊಳಕಾಲ್ಮೂರು ಸೀರೆ, ಉಡುಪಿ ಸೀರೆ, ನವಲಗುಂದದ ಡರ್ರಿ (ಕುಸುರಿ ಜಮಾಖಾನ), ಸಂಡೂರಿನ ಲಂಬಾಣಿ ಕಸೂತಿ, ಕಂಚಿನ ವಸ್ತುಗಳು, ಕಸೂತಿ, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಸ್ಯಾಂಡಲ್ ಅಗರಬತ್ತಿ, ಮೈಸೂರು ಶ್ರೀಗಂಧದ ಎಣ್ಣೆ ಮುಂತಾದವು.

Horti-tourism initiative wilts as pilot project sees zero footfall in 19 months

Pearl.DSouza@timesofindia.com

Bengaluru: The tourism department's push to promote horticulture-based getaways has hit a roadblock, with its pilot project at Thippagondanahalli failing to attract a single visitor in 19 months, even as work begins on a larger, London-garden-style initiative in Tumakuru.

Officials say the new venture at Doddasaggere in Koratagere, being developed through CSR funds, is expected to open to the public by March 2026. Of the 800-acre horticulture farm at the site, 250 acres are being prepared to showcase a diverse landscape of plants and curated spaces.

KM Parashivamurthy, additional director, horticulture, told **TOI** that the idea is to give the farm a "London-garden" feel. "The land has natural water bodies, and an adjacent 600-odd acres of fruit-bearing trees that will be further developed," he said.

Joint director of horticulture M Jagadeesh said basic amenities at Doddasaggere would take around three months to set up. However, for now, the only operational horti-tourism destination is the experimental site at Thippagondanahalli, and that too has drawn a blank in terms of public interest.



Picture for representation

NO GROWTH: The aim was to encourage people to spend time in a garden setting

A combined one-day tour from Bengaluru to Shivagange and the Thippagondanahalli farm — conceived as a quick escape for city residents — has seen no takers. "We don't know the reason, but there have been no visitors to the farm yet," said Sreenath KS, general manager (transport), Karnataka State Tourism Development Corporation (KSTDC). "The horti-tourism project began as a stand-alone visit to the Thippagondanahalli farm, and was later tweaked to include Shivagange. Even that did not work, despite adequate publicity."


Planned from Thursday to Sunday, the tour was scheduled to depart Yeswantpur KSTDC office at 6.30am, stop at the Vittala temple in Arishinakunte, halt for breakfast, proceed to Shivagange temple, break for lunch, explore the Thippagondanahalli farm, and return to Bengaluru by 6pm. On the intent behind the 27-acre Thippagondanahalli project, Parashivamurthy said, "The aim is to encourage visitors from the city to spend time in a garden setting, learn about plant propagation, and even try grafting and budding. Plants are labelled, and there is a medicinal section. We developed a children's activity area, set up a gazebo, and planned a cafeteria depending on footfall."

While the public response through KSTDC remains non-existent, he said school groups have been visiting the farm independently. "These visits are not ticketed because we want to spark interest among children in horticulture and help them understand how their food grows," he added.

Times of Ind pg 05

ಜಿರಳೆ ಕಾಫಿ

ಬೀಜಿಂಗ್‌ನ ವಸ್ತುಸಂಗ್ರಹಾಲಯದ ಕೆಫೆಯೊಂದು ಹೊಸ ಫ್ಲೇವರ್‌ನ ಕಾಫಿಯನ್ನು ಪರಿಚಯಿಸಿದೆ. ಈ ಕಾಫಿಯ ಬೆಲೆ ಕೇವಲ 570 ರೂಪಾಯಿ. ಕೊಂಚ ದುಬಾರಿ ಅನ್ನಿಸಬಹುದು. ಆದರೆ, ಕಾಫಿಯ ವಿಶೇಷತೆ ಇರುವುದು ಅದರ ಬೆಲೆಯಲ್ಲಲ್ಲ, ಅದಕ್ಕೆ ಹಾಕಿರುವ ಪದಾರ್ಥಗಳಲ್ಲಿ. ಯಾಕೆಂದರೆ, ಇದು ಸಾಮಾನ್ಯವಾದ ಕಾಫಿಯಲ್ಲ, ಜಿರಳೆ ಕಾಫಿ! ಹೌದು, ಈ ಕಾಫಿಗೆ ಜಿರಳೆ ಮತ್ತು ಮಿಲ್ಕ್‌ವಾರ್ಮ್ ಎಂದ ಹುಳದ ಪುಡಿಯನ್ನು ಹಾಕಲಾಗುತ್ತದೆ. ಚಂದ ಕಾಣಿಸಲು ಕಾಫಿಯ ಮೇಲೆ ಮತ್ತಷ್ಟು ಪುಡಿಯನ್ನು ಉದುರಿಸಲಾಗುತ್ತದೆ. ಇಂತಹ ಕಾಫಿಯನ್ನು ಯಾರಾದರೂ ಕುಡಿಯುತ್ತಾರಾ ಅಂತ ನಮಗನ್ನಿಸಬಹುದು. ಆದರೆ, ಹಾವು, ಜಿರಳೆಗಳನ್ನೂ ಸ್ಟಾಫ ಮಾಡುವ ಚೀನಾದಲ್ಲಿ ಈ ಕಾಫಿ ವೈರಲ್ ಆಗಿಬಿಟ್ಟಿದೆ. ದಿನಕ್ಕೆ ಕನಿಷ್ಠ ಹತ್ತು ಜನರಾದರೂ ಈ ಕಾಫಿಯನ್ನು ಕುಡಿಯುತ್ತಿದ್ದಾರಂತೆ. ಕಾಫಿಗೆ ಹಾಕುವ ಜಿರಳೆ ಪುಡಿಯನ್ನು ಚೀನಾದ ಸಾಂಪ್ರದಾಯಿಕ ಔಷಧ ಮಳಿಗೆಗಳಿಂದಲೇ ಖರೀದಿಸಲಾಗುತ್ತಿದೆಯಂತೆ. ಹಾಗಾಗಿ, ಈ ಕಾಫಿ ಫುಲ್ ಸೇಫ್ ಹಾಗೂ ಆರೋಗ್ಯಕರ ಅನ್ನುತ್ತಿದ್ದಾರೆ ಕೆಫೆ ಮಾಲೀಕರು.



ದೈತ್ಯ ಜೇಡ ಪತ್ತೆ

ಪ್ರಜಾವಾಣಿವಾರ್ತೆ



ಜೈಂಟ್‌ವುಡ್ ಸ್ಪೈಡರ್
ಚಿತ್ರ: ಸಂಗಮೇಶ ಕಡಗದ

ಗದಗ: ದಟ್ಟ ಅರಣ್ಯಪ್ರದೇಶದಲ್ಲಿ ಕಾಣಿಸಿಕೊಳ್ಳುವ ದೈತ್ಯ ಜೇಡ (ಜೈಂಟ್‌ವುಡ್ ಸ್ಪೈಡರ್) ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಸಾಸರವಾಡ ಪ್ರದೇಶದಲ್ಲಿ ಗೋಚರವಾಗಿದೆ.

ಜೀವವೈವಿಧ್ಯ ಸಂಶೋಧಕ ಮಂಜುನಾಥ ಎಸ್.ನಾಯಕ ಮತ್ತು ಅವರ ತಂಡದ ಸಂಗಮೇಶ ಕಡಗದ, ಶರಣುಗೌಡರ ಅವರು ದೈತ್ಯ ಜೇಡವನ್ನು ಪತ್ತೆ ಮಾಡಿದ್ದಾರೆ.

'ಈ ಪ್ರಭೇದದ ಜೇಡದಲ್ಲಿ ಹೆಣ್ಣು ಬಲಿಷ್ಠ.ಇವುಗಳಿಂದ ಅಪಾಯ ಇಲ್ಲ. ಜೇಡದಲ್ಲಿರುವ ವಿಷದ ಅಂಶ ಕೀಟ ಹಿಡಿಯಲು ಬಳಕೆ ಆಗುತ್ತದೆ' ಎಂದು ಮಂಜುನಾಥ ಎಸ್.ನಾಯಕ ತಿಳಿಸಿದರು.

ಟೊಮೆಟೋ ಬೆಲೆ ಶತಕ ದಾಟುವ ಭೀತಿ!

ಕುಸಿದ ಬೆಳೆಯ ಇಳುವರಿ | ಕಳೆದ ವಾರ ಇದ್ದ 20-30 ರೂ ಬೆಲೆ ದಿಢೀರ್ 60-70 ರೂ.ವರೆಗೆ ಏರಿಕೆ

ಸಂ.ಕ. ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಟೊಮೆಟೋ ಬೆಲೆ ದಿಢೀರನೆ ಗಗನಕ್ಕೇರಿದ್ದು, ಜನಸಾಮಾನ್ಯರ ಮಾಸಿಕ ಬಜೆಟ್ ಮೇಲೆ ತೀವ್ರ ಪರಿಣಾಮ ಬೀರಿದೆ. ಕಳೆದ ವಾರ ಕೆಜಿಗೆ 20 ರಿಂದ 30 ರೂ. ಆಸುಪಾಸಿನಲ್ಲಿದ್ದ ಟೊಮೆಟೋ ದರವು ಈಗ ದಿಢೀರನೆ ದುಪ್ಪಟ್ಟಾಗಿದ್ದು, ಮಾರುಕಟ್ಟೆಯಲ್ಲಿ 60 ರಿಂದ 70ರೂ. ಗಡಿ ದಾಟಿದೆ. ಈ ಅನಿರೀಕ್ಷಿತ ಬೆಲೆ ಏರಿಕೆಯಿಂದ ಗ್ರಾಹಕರು ಕಂಗಾಲಾಗಿದ್ದು, ಮುಂದಿನ ದಿನಗಳಲ್ಲಿ ಪೂರೈಕೆ ಸುಧಾರಿಸದಿದ್ದರೆ, ದರವು ಕೆಜಿಗೆ 100 ರೂ. ಗಡಿ ತಲುಪುವ ಭೀತಿ ಎದುರಾಗಿದೆ.

ಈ ಭಾರೀ ಬೆಲೆ ಏರಿಕೆಗೆ ರಾಜ್ಯಾದ್ಯಂತ ಟೊಮೆಟೋ ಇಳುವರಿ ಗಣನೀಯವಾಗಿ ಕುಸಿದಿರುವುದೇ ಮುಖ್ಯ ಕಾರಣವಾಗಿದೆ. ರೈತರು ಇತ್ತೀಚೆಗೆ ಎದುರಿಸಿದ ಹವಾಮಾನ ವೈಪರೀತ್ಯ ಮತ್ತು ತೀವ್ರ ರೋಗಬಾಧೆಗಳು ಬೆಳೆ ನಾಶಕ್ಕೆ ಕಾರಣವಾಗಿವೆ. ಅಕಾಲಿಕ ಮಳೆ ಮತ್ತು ತೇವಾಂಶದ ಏರುಪೇರುಗಳಿಂದಾಗಿ ಟೊಮೆಟೋ ಗಿಡಗಳಿಗೆ ಚುಕ್ಕೆ ರೋಗ ಮತ್ತು ಗಿಡ ಕೊಳೆತದಂತಹ



ಸಮಸ್ಯೆಗಳು ವ್ಯಾಪಕವಾಗಿ ಹರಡಿವೆ. ಇದರಿಂದ ಅಪಾರ ಪ್ರಮಾಣದ ಟೊಮೆಟೋ ಬೆಳೆ ಕೈಗೆ ಸಿಗುವ ಮುನ್ನವೇ ಹಾಳಾಗಿದೆ.

ರಾಜ್ಯಕ್ಕೆ ಹೊರ ರಾಜ್ಯಗಳಿಂದಲೂ ಬರುತ್ತಿದ್ದ ಟೊಮೆಟೋ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದೆ. ಟೊಮೆಟೋ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುವ ನೆರೆಯ ತಮಿಳುನಾಡಿನಲ್ಲೂ ಇಳುವರಿ ಕಡಿಮೆಯಾಗಿದೆ. ಈ ಕಾರಣದಿಂದಾಗಿ, ತಮಿಳುನಾಡಿನಿಂದ ರಾಜ್ಯಕ್ಕೆ ಬರುತ್ತಿದ್ದ ಟೊಮೆಟೋ ಪೂರೈಕೆ ಕುಸಿದಿದ್ದು, ಮಾರುಕಟ್ಟೆಯಲ್ಲಿನ ಬೇಡಿಕೆ ಮತ್ತು ಪೂರೈಕೆ ನಡುವಿನ ಅಂತರ ಹೆಚ್ಚಾಗಿದೆ. ಟೊಮೆಟೋ ಅಡುಗೆಗೆ ಅನಿವಾರ್ಯ ತರಕಾರಿಯಾಗಿರುವುದರಿಂದ, ಅದರ ಬೆಲೆ ಏರಿಕೆ ನೇರವಾಗಿ ಮಧ್ಯಮ ವರ್ಗದ ಕುಟುಂಬಗಳ ಮಾಸಿಕ ಬಜೆಟ್ ಮೇಲೆ ಗಂಭೀರ ಪರಿಣಾಮ ಬೀರಿದೆ.

ಪ್ರತಿ ವರ್ಷ ಜನವರಿ-ಫೆಬ್ರವರಿಯಲ್ಲಿ ಸ್ವಲ್ಪ ಪ್ರಮಾಣ ದಲ್ಲಿ ಏರಿಕೆಯಾಗುತ್ತಿದ್ದ ಟೊಮೆಟೋ ಬೆಲೆಯ ಬಿಸಿ, ಇಳುವರಿ ಕುಸಿತದ ಹಿನ್ನೆಲೆಯಲ್ಲಿ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿಯೇ ತಟ್ಟುತ್ತಿದೆ. ಇದರಿಂದಾಗಿ ಗ್ರಾಹಕರು ಹಾಗೂ ಹೋಟೆಲ್ ಮಾಲೀಕರು ಟೊಮೆಟೋ ಬದಲಾಗಿ ಪರ್ಯಾಯ ಪದಾರ್ಥಗಳನ್ನು ಬಳಸಲು ಆರಂಭಿಸಿದ್ದಾರೆ. ಆದರೂ, ಸಾಂಬಾರ್ ಮತ್ತು ಇತರೆ ಅಡುಗೆಗಳಲ್ಲಿ ಟೊಮೆಟೋ ಇಲ್ಲದೇ ಸಾಧ್ಯವಿಲ್ಲದವರು ಹೆಚ್ಚಿನ ಮೊತ್ತದ ಹಣ ನೀಡಿ ಖರೀದಿಸುವಂತಾಗಿದೆ. ಸದ್ಯದಲ್ಲೇ ಮದುವೆ ಸಮಾರಂಭಗಳು ಮತ್ತು ವರ್ಷಾಂತ್ಯದ ಹಬ್ಬಗಳು ಸಹ ಬರುತ್ತಿರುವುದರಿಂದ ಟೊಮೆಟೋಗೆ ಬೇಡಿಕೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆಯಿದೆ.

> ಕಳೆದ ವಾರದಲ್ಲಿ ರಾಜ್ಯದ ವಿವಿಧ ಜಿಲ್ಲೆ ಸೇರಿ ತಮಿಳುನಾಡಿನಿಂದ ರಾಜ್ಯದ ಮಾರುಕಟ್ಟೆಗಳಿಗೆ ಪೂರೈಕೆಯಾಗುತ್ತಿದ್ದ ಟೊಮೆಟೋ ಅರ್ಧಕ್ಕಿಂತಲೂ ಕಡಿಮೆಯಾಗಿದೆ. ಅಲ್ಲದೇ, ಅತಿಯಾದ ಮಳೆಯಿಂದಾಗಿ ಅನೇಕ ಪ್ರದೇಶಗಳಲ್ಲಿ ಬೆಳೆಗಳು ಹಾಳಾಗಿವೆ. ಈಗಾಗಲೇ ಮದುವೆ ಸೀಸನ್ ಆರಂಭವಾಗಿದೆ. ಹಲವು ಕಡೆಗಳಲ್ಲಿ ವಿವಾಹ ಸಮಾರಂಭಗಳು ಮತ್ತು ವರ್ಷಾಂತ್ಯದ ಹಬ್ಬಗಳು ಸಹ ಬರುತ್ತಿದೆ. ಇದೇ ಕಾರಣದಿಂದ ಟೊಮೆಟೋಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆಯಿದ್ದು, ಬೆಲೆ ಕೂಡಾ ಏರಿಕೆಯಾಗಲು ಕಾರಣವಾಗಿದೆ.
>
> ನವೀನ್ | ಟೊಮೆಟೋ ವ್ಯಾಪಾರಿ

S-karnataka pg 05


Cloudy skies brew slump for tea; output falls to 5-yr low

Growers Cite Poor Sunlight, Sliding Income

Anush.S@timesofindia.com



TOI



SLOPING DOWN: Data shows that tea cultivation in Karnataka dropped 5% annually to 1,778 hectares in 2025

Bengaluru: Karnataka's tea belt, which had inched its way up the production ladder over the past five years, has slipped to its lowest level in half a decade, raising concerns among planters who are already reeling under erratic weather and rising costs.

While the state contributes 70% of the country's coffee output, its tea production has followed a different arc. After modest gains since 2019, the output dropped to 4.5 million kg in 2024. Growers point to poor sunlight and falling incomes, which are resulting in acreage dipping, as key reasons for the slide.

"You need both rain and sunshine for tea to grow. Even if you get intermittent rain with good sunshine, you will have a good crop. In 2023, even though the rain was slightly on the higher side, we had a good amount of sunshine, and we had a decent crop. But in 2024, there was a lot of rain and mostly cloudy weather, so our crop is not growing," Namitha Rao, a planter in Koppa taluk, Chikkamagaluru district, said.

In 2019, the state produced more than 4.6 million kg of tea. While the figure was far lower than that of Kerala or Tamil Nadu, it rose steadily to more than 5.5 million kg by 2023 before sliding in 2024, according to the Tea Board of India.

Half of the 2,093 hectares where tea is grown in Karnataka is in Koppa, with Sakleshpur (Hassan), Kodagu, and Kelagur (Chikkamagaluru) accounting for the rest. The fall in output has come despite an uptick in the national trend.

"The area of tea cultivation is decreasing year by year; it is not as rewarding as coffee. Some of the lands that used to have tea have been taken over by other crops. Harvesting tea involves huge dependence on labour, and it is a very mechanical process," Sanjay Mathais, a planter of Mudigere, said.

Sanjay said mechanisation could help push plantations towards stability.

"We are trying to get battery-operated shears to harvest the leaf. If we manage to get a good crop next April-May, then these shears could help the situation improve," he pointed out.

Data from the United Planters Association of South India's tea foundation, based on 12 plantations, shows the tea cultivation in the state dropped to 1,778 hectares in 2025 — a 5% fall from the same period last year.

The Tea Board's 2025 figures are awaited, but planters expect a better showing than last year's dip.

Times of Ind pg 05

Sugar MSP to be Raised After Seven Years, by 23%

Move may raise price to ₹38/kg; ethanol procurement price likely to be revised too

Shambhavi Anand

New Delhi: The government is expected to raise the minimum selling price (MSP) of sugar — after a nearly seven-year pause —by nearly 23% to ₹38 per kg, said people aware of the matter.

The Centre could also increase ethanol procurement price for sugarcane-based feedstock, the people said.

The steps would follow the Centre clearing the export of 1.5 million tonnes of sugar for the 2025–26 season (October–September).

The government has maintained the MSP of sugar at ₹31 per kg since February 2019. The industry has been pushing for an increase in the price, citing higher production costs. An increase in MSP will boost liquidity for sugar mills, helping them pay cane farmers.

"In accordance with Section 9 of the Sugar (Control) Order, 2025, and considering the 4.42% increase in FRP (Fair and Remunerative Price) along with the rise in inflation-linked input costs, revision of the Sugar MSP to ₹41 per kg is both justified and logical," the National Federation of Co-operative Sugar Factories said in a letter to union minister for food and public distribution Pralhad Joshi.

Status quo on ethanol prices adversely affects the ability of mills to meet cane payment obligations, especially when FRP and other input costs are continuing to rise, the industry body said, in the letter.

Ethanol revenues contribute more than 20% of the total cane price payable to farmers. Prices for ethanol produced from B-heavy molasses and sugarcane juice or syrup have remained unchanged since ESY /add full form/ 2022–23.

Sugar season 2025–26 began with opening stocks of about 5 million tonnes (MT). With an estimated net production of 31.5 MT and domestic consumption of 29 MT, the overall sugar surplus is likely at around 7.5 MT. After maintaining a buffer stock of 5 MT, similar to last year, there will be a net surplus of about 2.5 MT, according to industry estimates.



PUSH FROM INDUSTRY

The government has maintained the MSP of sugar at ₹31 per kg since February 2019. The industry has been pushing for an increase in the price, citing higher production costs

Eco Times pg 05